**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/ಆಯವ್ಯಯ/16/ಯುಬಾ/84/2019-20

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು. ದಿನಾಂಕ: 18/06/2020

# ಸುತ್ತೋಲೆ

**ವಿಷಯ**:- 7ನೇ ಯುಜಿಸಿ ವೇತನ ಶ್ರೇಣಿ ಹಿಂಬಾಕಿ ಕುರಿತಂತೆ

*****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ / ಖಾಸಗಿ ಅನುದಾನಿತ ಹಾಗೂ ಬಿ.ಎಡ್ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ / ನಿವೃತ್ತಿ ಹೊಂದಿರುವ / ಮೃತಪಟ್ಟಿರುವ ಅರ್ಹ ಬೋಧಕ ಹಾಗೂ ತತ್ಸಮಾನ ವೃಂದದ ಸಿಬ್ಬಂದಿಗಳಿಗೆ ದಿನಾಂಕ: 01/01/2016 ರಿಂದ 31/03/2019 ರವರೆಗಿನ 7ನೇ ಪರಿಷ್ಕೃತ ಯುಜಿಸಿ ವೇತನ ಹಿಂಬಾಕಿಯನ್ನು ಎಲ್ಲಾ ಕಾಲೇಜುಗಳ ಪ್ರಾಂಶುಪಾಲರ ಖಾತೆಗೆ ಈಗಾಗಲೇ ಜಮೆ ಮಾಡಲಾಗಿರುತ್ತದೆ. ಹಿಂಬಾಕಿ ಮೊತ್ತವನ್ನು ಪ್ರಾಂಶುಪಾಲರ ಖಾತೆಯಿಂದ ಅಧ್ಯಾಪಕರುಗಳಿಗೆ NEFT/RTGS ಮುಖೇನ ವಿತರಿಸಿರುವ ಕುರಿತು ಇಲಾಖಾ ವೆಬ್‌ಸೈಟ್‌ನಲ್ಲಿ ಲಭ್ಯವಿರುವ Excel File ಅನ್ನು ಡೌನ್‌ಲೋಡ್ ಮಾಡಿಕೊಂಡು ಪೂರ್ಣವಾದ ಮಾಹಿತಿಯನ್ನು ಭರ್ತಿಮಾಡಿ ಸಾಫ್ಟ್ ಪ್ರತಿಯನ್ನು dce.ugcarrears@gmail.com ಗೆ ದಿನಾಂಕ: 22/06/2020 ರೊಳಗಾಗಿ ಕಳುಹಿಸುವಂತೆ ಸೂಚಿಸಲಾಗಿದೆ.

**ವಿಶೇಷ ಸೂಚನೆಗಳು:**

1. ಒಂದೇ ಕಾಲೇಜಿನಿಂದ ಹಲವು ಬಾರಿ ಸ್ವೀಕೃತವಾಗುವ ಇ-ಮೇಲ್ ಮಾಹಿತಿಯನ್ನು ಪರಿಗಣಿಸಲಾಗುವುದಿಲ್ಲ. ಆದುದರಿಂದ ಒಂದು ಬಾರಿ ಮಾತ್ರ ಕಳುಹಿಸತಕ್ಕದ್ದು.
2. Excel File ನಲ್ಲಿ ಕಳುಹಿಸಲಾಗುವ ಮಾಹಿತಿಯನ್ನು ಪ್ರಾಂಶುಪಾಲರು ಖುದ್ದು ನಿಗಾವಹಿಸಿ, ಯಾವುದೇ ತಪ್ಪುಗಳಿಗೆ ಆಸ್ಪದಕೊಡದಂತೆ ಭರ್ತಿ ಮಾಡುವುದು. ಸಲ್ಲಿಸಲಾಗುವ ಮಾಹಿತಿಗೆ ಅಥವಾ ಮಾಹಿತಿಯಲ್ಲಿನ ಯಾವುದೇ ನ್ಯೂನತೆಗೆ ಪ್ರಾಂಶುಪಾಲರೇ ಹೊಣೆಗಾರರಾಗಿರುತ್ತೇವೆಂದು ತಿಳಿಸುವ ದೃಢೀಕರಣವನ್ನು ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.
3. ದಿನಾಂಕ: 22/06/2020 ರ ನಂತರ ಸ್ವೀಕೃತವಾಗುವ ಇ-ಮೇಲ್ ಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಆದುದರಿಂದ ವಿಳಂಬಕ್ಕೆ ಆಸ್ಪದ ನೀಡದಂತೆ ನಿಗದಿತ ದಿನಾಂಕದೊಳಗೆ ಮಾಹಿತಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.
4. ಖಾಸಗಿ ಅನುದಾನಿತ ಕಾಲೇಜುಗಳಿಂದ ಸಂಬಂಧಿಸಿದ ಮಾಹಿತಿಯನ್ನು ಪ್ರಾದೇಶಿಕ ಜಂಟಿನಿರ್ದೇಶಕರುಗಳು ಕ್ರೋಢೀಕರಿಸಿ, ದೃಢೀಕರಣ ಪತ್ರದೊಂದಿಗೆ ಸಾಫ್ಟ್ ಪ್ರತಿಯನ್ನು dce.ugcarrears@gmail.com ಗೆ ಕಳುಹಿಸತಕ್ಕದ್ದು.

ಕಾಲೇಜು ಶಿಕ್ಷಣ ನಿರ್ದೇಶಕರು

ಪ್ರತಿಯನ್ನು:

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ
2. ಪ್ರಾದೇಶಿಕ ಜಂಟಿನಿರ್ದೇಶಕರು, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಕಲ್ಬುರ್ಗಿ ಮತ್ತು ಶಿವಮೊಗ್ಗ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
3. ಮಾಹಿತಿ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
4. ಕಛೇರಿ ಪ್ರತಿ.